ಶ್ರೀ ಬಿ.ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು) :

ಅ) ಇಲ್ಲ.

ಆ) ನಗರ ಸ್ಥಳೀಯ ಸಂಸ್ಥೆಗಳ ನಿವೃತ್ತ ನೌಕರರಿಗೆ 5ನೇ ವೇತನ ಆಯೋಗದ ಶಿಫಾರಸ್ಸುಗಳನ್ನು ಜಾರಿಗೊಳಿಸುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.

ಇ) ಸರ್ಕಾರದ ಪರಿಶೀಲನಮಯಲ್ಲಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಆದಷ್ಟು ಬೇಗನೆ ಈ ಬಗ್ಗೆ ನಿರ್ಧಾರ ಕೈಗೊಳ್ಳಲಾಗುವುದು.

ಮೈಸೂರು ಮಹಾನಗರ ಪಾಲಿಕೆ ದಿನಗೂಲಿ ನೌಕರರಿಗೆ ಕಾಲಿಕ ವೇತನ ಕುರಿತು

4790 - ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1986ರ ನಂತರ ಮೈಸೂರು ಮಹಾನಗರ ಪಾಲಿಕೆಯಲ್ಲಿ ನೇಮಕಗೊಂಡಿದ್ದು ದಿನಗೂಲಿ ನೌಕರರಿಗೆ ಕಾಲಿಕ ವೇತನ ನೀಡುತ್ತಿರುವುದನ್ನು ರದ್ದುಪಡಿಸಲಾಗಿದೆಯೇ?

ಆ) ಹಾಗಿದ್ದಲ್ಲಿ ಎಂದಿನಿಂದ ಹಾಗೂ ಇದಕ್ಕೆ ಕಾರಣಗಳೇನು?

ಇ) ಈ ನೌಕರುಗಳಿಗೆ ಕಾಲಿಕ ವೇತನವನ್ನೇ ನೀಡುವ ಬಗ್ಗೆ ಸರ್ಕಾರದ ನೀಲುವೇನು?

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು) :

ಅ) ಹೌದು.

ಆ) ನಿಯಮಾವಳಿಗಳಲ್ಲಿ ಅವಕಾಶವಿಲ್ಲದ ಕಾರಣ ದಿನಾಂಕ 1-8-2000ರಿಂದ ರದ್ದುಗೊಳಿಸಲಾಗಿದೆ.

ಇ) ಮೇಲಿನ 'ಅ' ಉತ್ತರದಿಂದ ಉದ್ಭವಿಸುವುದಿಲ್ಲ.

ಮೈಸೂರು ನಗರದಲ್ಲಿರುವ ದೊಡ್ಡ ಮೋರಿಗಳ ಹೂಳೆತ್ತುವ ಕಾರ್ಯ

4792 - ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರದಲ್ಲಿರುವ ದೊಡ್ಡ ಮೋರಿಗಳಲ್ಲಿನ ಹೂಳೆತ್ತುವ ಹಾಗೂ ಮೋರಿಗಳ ಮೇಲೆ ಸ್ಲಾಬ್ ಹಾಕುವ ಕಾಮಗಾರಿ ಕೆಲಸವನ್ನು ಎ.ಡಿ.ಬಿ. ಯೋಜನೆಯಡಿ ಸೇರಿಸಲಾಗಿದೆಯೇ?

ಆ) ಹಾಗಾದಲ್ಲಿ ಈ ಬಗ್ಗೆ ಯಾವ ಯಾವ ಬಡಾವಣೆಗಳಲ್ಲಿ ಮೋರಿಗಳಲ್ಲಿ ಕಾಮಗಾರಿ ಕೆಲಸ ಕೈಗೊಳ್ಳಲು ಎಷ್ಟು ಅಂದಾಜು ವೆಚ್ಚ ತಗಲುವುದು?